

ಡಾ.ವಿನೋದ ಛೆಬ್ಬಿ

ಒಳಮನಸ್ಸಿನ ದ್ವಂದ್ವಗಳು ನಂಬಲಾಗದಷ್ಟು ವಿಚಿತ್ರವಾಗಿರುತ್ತವೆ!

# 129: ಸಬಲೀಕರಣ ಬೇಕು- 1

ಕರುಣಾ ಚಿಕಿತ್ಸೆಗೆಂದು ಮತ್ತೆ ಬಂದಿದ್ದಾಳೆ. ಈ ಸಲ ಒಬ್ಬಳೇ ಬಂದಿದ್ದಾಳೆ. ಎರಡು ವರ್ಷಗಳ ಹಿಂದೆ ಕರುಣಾ (ನಿಜವಾದ ಹೆಸರಲ್ಲ) ನನ್ನನ್ನು ಭೇಟಿಯಾಗಿದ್ದಳು. ಆಕೆಗಾಗ ನಲವತ್ತು ದಾಟಿತ್ತು. ಎಂ.ಎಸ್ಸಿ. ಓದಿದ್ದಾಳೆ. ಒಂದೂವರೆ ದಶಕದಿಂದ ವಿವಾಹಿತೆ. ಮಕ್ಕಳಿಲ್ಲ. ಆಕೆಯ ಸಮಸ್ಯೆ? ಸಮಸ್ಯೆ ಆಕೆಯದಲ್ಲ, ಆಕೆಯ ಗಂಡನದು. ಆತ ಇತರ ಹೆಣ್ಣುಗಳನ್ನು ಕದ್ದು ನೋಡುತ್ತಾನಂತೆ, ಅಪರಿಚಿತರನ್ನು ಅಲ್ಲದೆ ಸಂಬಂಧೀ ಮಹಿಳೆಯರನ್ನೂ ಕಣ್ಣಿನಿಂದಲೇ ಕೂಡುವಂತೆ ನೋಡುತ್ತಾನೆ. ಆಗ ಅವನಲ್ಲಿ ಕಾಮಭಾವನೆ ಉಕ್ಕುತ್ತಿರುವುದು ಆಕೆಗೆ ಗೊತ್ತಾಗುತ್ತದೆ. ಕನಿಷ್ಠ ಇಬ್ಬರು ಹೆಣ್ಣುಗಳೊಂದಿಗೆ ಮಲಗಿದ್ದಾನೆಂದು ಇವಳಿಗೆ ಖಚಿತವಾಗಿ ಗೊತ್ತು. ಈ ವರ್ತನೆಯಿಂದ ಅವನನ್ನು ಹೊರತರಲು ಸಲಹೆಗಾಗಿ ಬಂದಿದ್ದಳು.

ಗಂಡನನ್ನು ಕರೆತರಲು ತಿಳಿಸಿದಾಗ ಅವನೂ ಬಂದ. ಹೆಂಗಸರನ್ನು ಸಹಜವಾಗಿ ನೋಡುತ್ತೇನೆಯೇ ವಿನಾ ಕೆಟ್ಟ ಉದ್ದೇಶವಿಲ್ಲ, ಆದರೆ ಹೆಂಡತಿ ವಿನಾಕಾರಣ ಸಂದೇಹಿಸುತ್ತಾಳೆ ಎಂದ. ಅವಳ ಕಿರಿಕಿರಿ ತಾಳದೆ ಅವನು ಮನೆಬಿಟ್ಟು ಹೋಗಿದ್ದೇನೆಂದ. ಅವಳನ್ನು ಶಾಂತಪಡಿಸುವುದು ಅವನಿಗೂ ಬೇಕೆಂದ. ಸರಿ, ಇಬ್ಬರಿಗೂ ದಾಂಪತ್ಯ ಚಿಕಿತ್ಸೆ ಶುರುವಾಯಿತು. ಚಿಕಿತ್ಸೆಯ ಮೂರನೆಯ ದಿನ ಗಂಡನು ಪರಿಚಿತ ಹೆಣ್ಣುಗಳಿಗೆ (ಹೆಂಡತಿಗೆ ತಿಳಿಯದಂತೆ) ಗಾಳಿಯಲ್ಲಿ ಮುತ್ತು ತೂರುವ ವಿಷಯ ಚರ್ಚೆಗೆ ಬಂತು. ಅವನು ಸಾರಾಸಗಟಾಗಿ ಅಲ್ಲಗಳೆದ. ಇದು ಅವಳ ಭ್ರಮೆಯಷ್ಟೆ ಎಂದು ಸಾಧಿಸಿದ. ಮಾತು ದಡ ಕಾಣದಾದಾಗ ಕರುಣಾ ರೋಸಿ ಹೇಳಿದಳು. 'ಇವನಿಗೋಸ್ಕರ ಉದ್ಯೋಗ ಬಿಟ್ಟು ಮನೆಯಲ್ಲಿದ್ದು ಒಂಟಿಯಾದೆ. ಇವನ ದೋಷದಿಂದ ತಾಯಿಯಾಗಲಾರದೆ ಇನ್ನೂ ಒಂಟಿಯಾದೆ. ಇನ್ನು, ಇವನ ಹೊರಹೆಣ್ಣುಗಳ ಚಟದಿಂದ ಇನ್ನಷ್ಟು ಒಂಟಿಯಾಗುತ್ತಿದ್ದೇನೆ. ಇವನಿಂದ ನನಗೆ ಏನೂ ಸಿಕ್ಕಿಲ್ಲ, ಸಿಗುವುದೂ ಇಲ್ಲ. ಇವನನ್ನು ತೊರೆಯುವುದೊಂದೇ ನನಗಿರುವ ಹಾದಿ!' ಎಂದು ನಿಶ್ಚಯಿಸಿ ಹತಾಶೆಯಿಂದ ಎದ್ದಳು. ಆಕೆಗೆ ಕೆಲಸ ಸಿಕ್ಕ ತಕ್ಷಣ ವಿಚ್ಛೇದನದ ಅರ್ಜಿಗೆ ಸಹಿಹಾಕುವುದಕ್ಕೆ ಗಂಡನೂ ಒಪ್ಪಿದ. ದಾಂಪತ್ಯ ಚಿಕಿತ್ಸೆ ಅಲ್ಲಿಗೇ ನಿಂತಿತು. ಅವೊತ್ತು ಹೋದವಳು ಎರಡು ವರ್ಷದ ನಂತರ ಮತ್ತೆ ಬಂದಿದ್ದಾಳೆ– ಒಬ್ಬಳೇ. ಯಾಕಿರಬಹುದು?

ಔಪಚಾರಿಕ ಮಾತಿನ ನಂತರ ಕರುಣಾ ತಾನು ಬಂದ ಕಾರಣವನ್ನು ತಿಳಿಸಿದಳು. ಹೋದಸಲ ಆಕೆಯ ಸಬಲೀಕರಣದ (empowerment) ಬಗೆಗೆ ಮಾತಾಡಿದ್ದೆ. ಗಂಡನನ್ನು ಬಿಡಬೇಕಾದರೆ ಸಬಲೀಕರಣ ಬೇಕೇಬೇಕು ಎಂದು ಒತ್ತಿಹೇಳಿದ್ದೆ. ಆಕೆಯ ಒಂಟಿತನಕ್ಕೆ ಪರಿಹಾರ ಇದೆಯೆಂದಿದ್ದೆ. ಆಗಿನಿಂದ ಅದರ ಬಗೆಗೆ ಯೋಚಿಸಿದ್ದಾಳೆ. ತಾನು ಗಟ್ಟಿಯಾಗಬೇಕು, ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳಬೇಕು, ಗಂಡನ ಅವಲಂಬನೆಯನ್ನು ಬಿಡಬೇಕು. ಈ ಸಂಬಂಧದಿಂದ ಸ್ವತಂತ್ರವಾಗಬೇಕು ಎಂದು ಬಲವಾಗಿ ಅನ್ನಿಸುತ್ತಿದೆ. ಹಾಗೆಂದು ಉದ್ಯೋಗಕ್ಕೆ ಅರ್ಜಿಹಾಕಬೇಕು ಎನ್ನುವಾಗ ಬುದ್ಧಿ ಓಡಿದರೂ ಕೈಕಾಲು ಎಲ್ಲೂ ಓಡುವುದಿಲ್ಲ. ದೇಹಾಲಸ್ಯ ಆಕೆಯನ್ನು ಅವಿಶ್ರಾಂತ ಹಣ್ಣುಮಾಡುತ್ತಿದೆ. ಅದಕ್ಕಾಗಿ ಚಿಕಿತ್ಸೆಗೆ ಬಂದಿದ್ದಾಳೆ.

ಕರುಣಾಳ ದಾಂಪತ್ಯದ ಸ್ಥಿತಿಯ ಬಗೆಗೆ ವಿಚಾರಿಸಿದೆ. ಇಬ್ಬರ ಸಂಬಂಧ ಇನ್ನಷ್ಟು ಹದಗೆಟ್ಟಿದೆ. ಅವರ ಅಷ್ಟಕ್ಕಷ್ಟೇ ಇದ್ದ ಮಾತುಕತೆಯೂ ಈಗ ನಾಟಕವಾಗುತ್ತಿದೆ. ಸಾಕಾಗದ್ದಕ್ಕೆ ಗಂಡ ಇತ್ತೀಚೆಗೆ ಪರಸಂಬಂಧ ಇಟ್ಟುಕೊಂಡಿದ್ದಾನೆಂದು ಗೊತ್ತಾಗಿದೆ. ಅವನ ಪ್ರೇಯಸಿ ಇವಳದೇ ಸಂಬಂಧಿಕಳು. ಪ್ರೇಮಿಗಳ ನಡುವೆ ಪ್ರತಿನಿತ್ಯ ಗಂಟೆಗಟ್ಟಲೆ ಮಾತು, ಭೇಟಿ, ಕಾಣಿಕೆಗಳ ವಿನಿಮಯ, ಹಾಗೂ ಆಗಾಗ ಲೈಂಗಿಕ ಸಂಪರ್ಕ – ಇದೆಲ್ಲ ಪ್ರೇಯಸಿಯ ಗೆಳತಿಯ ಮೂಲಕ ದಿನಾಲೂ ವರದಿಯಾಗುತ್ತಿದೆ. ಅವನು ಮನೆಗೆ ತಡಮಾಡಿ ಬಂದು, ಕೆಲಸ ವಿಪರೀತ ಇತ್ತು ಎಂದು ಸುಳ್ಳು ಹೇಳುವಾಗ, ಸಂಜೆಯೆಲ್ಲ ಪ್ರೇಯಸಿಯೊಂದಿಗೆ ಕಳೆದಿದ್ದಾನೆಂದು ಆಕೆಗೆ ಗೊತ್ತು. ಅಷ್ಟೇ ಅಲ್ಲ, ಇವಳು ಮನೋಚಿಕಿತ್ಸೆಗೆಂದು ಗಂಡನ ಹತ್ತಿರ ಹಣ ಕೇಳಿದಾಗ ಆತ ಒಪ್ಪಿದ್ದು, ಅದನ್ನು ಅವನು ಪ್ರೇಯಸಿಗೆ ಹೇಳಿಕೊಂಡಿದ್ದು, ಇಬ್ಬರೂ 'ಈಕೆಯ ತಲೆ ಸರಿಯಿಲ್ಲ' ಎಂದು ಕೀಳಾಗಿ ನಕ್ಕಿದ್ದು ಕೂಡ ಇವಳಿಗೆ ಗೊತ್ತಾಗಿದೆ. ಹಾಗಿದ್ದರೂ ಇವಳು ಈ ಪ್ರಕರಣದ ಬಗೆಗೆ ಅವನನ್ನು ತರಾಟೆಗೆ ತೆಗೆದುಕೊಂಡಿಲ್ಲ. ಅವನ ಸ್ವಭಾವ ಇನ್ನಷ್ಟು ಸ್ಪಷ್ಟವಾಗಿ, ಜಗಳದ ಬದಲು ವಿಚ್ಛೇದನದ ನಿರ್ಧಾರಕ್ಕೆ ಬಂದು, ಸಬಲೀಕರಣಕ್ಕಾಗಿ ನನ್ನ ಹತ್ತಿರ ಬಂದಿದ್ದಾಳೆ.

ಕರುಣಾ ಇನ್ನೊಂದು ವಿಷಯ ಹೇಳಿದಳು. ಗಂಡ ಹೊರಗೆ ಸುತ್ತಾಡಲು ಇವಳನ್ನು ಆಗಾಗ ಕರೆಯುತ್ತಿದ್ದ. ಮೊನ್ನೆ ಕರೆದಾಗ ಇವಳು ಒಪ್ಪಿ, ಇಬ್ಬರೂ ಮೂರು ದಿನ ಬೆಟ್ಟದೂರಿಗೆ ಹೋಗಿಬಂದಿದ್ದಾರೆ. ಬಿಡಲಿರುವ ಗಂಡನ ಒಡನಾಟ ಸವಿಯಲು ಮನಸ್ಸು ಹೇಗೆ ಬಂತು? ತನಗೋಸ್ಕರ ಅಲ್ಲ, ತನ್ನ ನಾಯಿಗಳ ಸಲುವಾಗಿ ಎಂದಾಕೆ ಹೇಳಿದಳು. ಅಂದಹಾಗೆ ಕರುಣಾ ಎರಡು ನಾಯಿಗಳನ್ನು ಸಾಕಿದ್ದಾಳೆ. ಗ್ರೇಟ್ ಡೇನ್ ಜಾತಿಯ ದೈತ್ಯಾಕಾರದ ನಾಯಿಗಳು ಇವಳ ಮೇಲೆ ಬಿದ್ದು ಮುದ್ದುಮಾಡುವಾಗ ಇವಳಿಗೆ ಸಿಗುವ ತೃಪ್ತಿ ಅಷ್ಟಿಷ್ಟಲ್ಲ. ಅವುಗಳಿಗೆ ನಗರದ ವಾತಾವರಣದಿಂದ ದೂರವಾದ ಪ್ರಕೃತಿಯ ಮಡಿಲು ಬೇಕಿತ್ತು. ಅದಕ್ಕಾಗಿಯೇ ಈ ಪ್ರವಾಸ ಎಂದು ಸ್ಪಷ್ಟಪಡಿಸಿದಳು.

ಅಷ್ಟೇ ಅಲ್ಲ, ಆಕೆ ಇನ್ನೊಂದು ವಿಷಯವನ್ನೂ ಹಂಚಿಕೊಂಡಳು. ಬೆಟ್ಟದೂರಿನಲ್ಲಿ ವಿರಮಿಸುತ್ತಿದ್ದಾಗ ಗಂಡ ಇವಳನ್ನು ಮುಟ್ಟಿದ್ದಾನೆ. ಇಬ್ಬರಲ್ಲಿ ಸಂಭೋಗವೂ ನಡೆದಿದೆ.

ನನಗೆ ಗೊಂದಲವಾಯಿತು. ಒಂದುಕಡೆ ಗಂಡನನ್ನು ಬಿಟ್ಟು ಬಿಸಾಕಬೇಕು ಎನ್ನುವವಳು ಎರಡು ವರ್ಷವಾದರೂ ಜೊತೆಗೇ ಇದ್ದಾಳೆ. ಸ್ವಂತ ಗಳಿಸಬೇಕು ಎನ್ನುವವಳು ಗಂಡನಿಂದ ಹಣದ ಸಹಾಯ ಪಡೆಯುತ್ತಿದ್ದಾಳೆ. ಅವನಿಂದ ದೂರವಾಗಬೇಕು ಎನ್ನುವವಳು ಅವನೊಡನೆ ಪ್ರವಾಸಕ್ಕೆ ಹೋಗಿದ್ದಾಳೆ. ಪ್ರೇಯಸಿಯನ್ನು ಕೂಡುತ್ತಿರುವ ಗಂಡನನ್ನು ಸ್ವತಃ ಕೂಡಿ ಸುಖ ಅನುಭವಿಸಿದ್ದಾಳೆ. ಇಷ್ಟಾದರೂ ಈ ಸಂಬಂಧ ಮುರಿದುಕೊಳ್ಳಲು ಸಬಲೀಕರಣ ಬಯಸುತ್ತಿದ್ದಾಳೆ!

ನನಗೆ ತಲೆಬುಡ ಅರ್ಥವಾಗಲಿಲ್ಲ. ನಾನು ಕೇಳಿದೆ. 'ಕರುಣಾ, ಒಂದು ಮಾತು ಹೇಳಿ. ಒಂದುಕಡೆ ನಿಮ್ಮ ಕಾಲಮೇಲೆ ನಿಂತುಕೊಳ್ಳಬೇಕೆಂದು ಮನಸ್ಸು ಮಾಡುತ್ತಿದ್ದೀರಿ. ಇನ್ನೊಂದು ಕಡೆ ಅದಕ್ಕಾಗಿ ಪ್ರಯತ್ನಕ್ಕೆ ಮನಸ್ಸು ಮಾಡುತ್ತಿಲ್ಲ. ಇದರ ಹಿಂದೆ ಏನಿರಬಹುದು?' ಆಕೆ ಯೋಚಿಸಿದಳು. 'ಬಹುಶಃ ನೆರವಿಗಾಗಿ ಗಂಡನನ್ನು ಅವಲಂಬಿಸುವುದು ಪರವಾಗಿಲ್ಲ ಎಂದುಕೊಂಡಿದ್ದೇನೆ.'

ತಕ್ಷಣ ಎದ್ದುಹೋಗಿ ಬಿಳಿಹಲಗೆಯ ಮೇಲೆ ಆಕೆ ಹೇಳಿದ್ದನ್ನು ಬರೆದೆ. 'ಗಂಡ ಸುಳ್ಳು ಹೇಳುತ್ತಾನೆ. ತನ್ನ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದಿಲ್ಲ. ಪ್ರಾಮಾಣಿಕನಾಗಿಲ್ಲ. ಸ್ವಾರ್ಥಿಯಾಗಿದ್ದಾನೆ. ಪರಸಂಬಂಧ ಹೊಂದಿದ್ದಾನೆ. ಹೀಗಿದ್ದರೂ ನಾನು ಅವನನ್ನು ಅವಲಂಬಿಸುವುದು ಪರವಾಗಿಲ್ಲ.' ಅದನ್ನು ಹಲವು ಸಲ ಓದಲು ಹೇಳಿ ಕಾಯ್ದೆ.

ಅದನ್ನು ಓದುತ್ತ ಆಕೆ ದಿಗ್ಭ್ರಮೆಗೊಂಡಳು. 'ಹೌದು, ನಿಜ! ಅವನು ಹೀಗೆಂದು ಗೊತ್ತಿದ್ದರೂ ಅವನನ್ನು ಯಾಕೆ ನೆಚ್ಚಿಕೊಂಡಿದ್ದೇನೆ? ನನಗೇನಾಗಿದೆ?' ಎಂದು ತನ್ನನ್ನೇ ಪ್ರಶ್ನಿಸಿಕೊಂಡಳು.

ಕರುಣಾಳ ಅತ್ಯಾವಲಂಬನೆಯ ಹಿಂದಿನ ಕಾರಣವೇನು? ಅದನ್ನು ಮುಂದಿನ ಸಲ ಗೊತ್ತುಮಾಡಿಕೊಳ್ಳೋಣ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (11ರಿಂದ ಸಂಜೆ 5ರ ತನಕ).